SC 1/2021
PW.14

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 1/2021** **ಅ.ಸಾ.14**

**ಚಾ.ಸಾ.28**

| | | |
|---|---|---|
| ಸಾಕ್ಷಿದಾರರ ಹೆಸರು | - | ಮಂಜುನಾಥ |
| ತಂದೆಯ ಹೆಸರು | - | ಹಿರಿಯಣ್ಣ ನಾಯಕ್ |
| ವಯಸ್ಸು | - | 50 ವರ್ಷ |
| ಉದ್ಯೋಗ | - | ಪೋಲಿಸ್ ನಿರೀಕ್ಷಕರು |
| ವಿಳಾಸ | - | ಲೋಕಾಯುಕ್ತ, ಉಡುಪಿ. |

ದಿನಾಂಕಃ 06-04-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

1. ನಾನು ಅಕ್ಟೋಬರ್ 2018 ರಿಂದ ಜೂನ್ 2021 ರವರೆಗೆ ಉಡುಪಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣದ ಮುಂದಿನ ತನಿಖೆಯನ್ನು ಅಸಾ.12 ಇವರಿಂದ ಕೈಗೆತ್ತಿಕೊಂಡು ಕಡತ ಪರಿಶೀಲಿಸಿರುತ್ತೇನೆ. ದಿನಾಂಕ 13-02-2020 ರಂದು ಕೃತ್ಯ ನಡೆದ ಸ್ಥಳವಾದ ಉಡುಪಿಯ ನಿಟ್ಟೂರು ವಿಷ್ಣಮೂರ್ತಿ ನಗರದಲ್ಲಿರುವ ಮೃತಳ ವಾಸದ ಮನೆಗೆ ಭೇಟಿ ನೀಡಿರುತ್ತೇನೆ. ತನಿಖೆ ಕೈಗೊಂಡು ಘಟನಾ ಸ್ಥಳಕ್ಕೆ ಶ್ವಾನ ದಳ, ಬೆರಳಚ್ಚು ತಜ್ಞರು ಹಾಗೂ ಕೆಎಂಸಿ ಯ ವಿಧಿವಿಜ್ಞಾನ ಪ್ರಯೋಗಾಲಯದ ವೈದ್ಯರನ್ನು ಕರೆಸಿರುತ್ತೇನೆ. ಸದ್ರಿ ಅಧಿಕಾರಿಗಳು ಸ್ಥಳವನ್ನು ಪರಿಶೀಲನೆ ಮಾಡಿರುತ್ತಾರೆ. ಶ್ರೀಮತಿ ಮಾಲತಿ ಕಾಮತ್ ಇವರ ಮೃತ ದೇಹವು ವಾಸದ ಅರ್ಧ ಕೆಡವಿದ ಮನೆಯ ಮರದ ಮಂಚದ ಮೇಲೆ ಇದ್ದ ಶವವನ್ನು ಪರಿಶೀಲಿಸಿದಾಗ ಕುತ್ತಿಗೆಯ ಮಂಭಗಾದಲ್ಲಿ ಲಿಗೇಚರ್ ಮಾರ್ಕ್, ಎಡ ಕಿವಿ ಬೆಂಡೋಲೆ ಹಾಕುವ ಕೆಳಭಾಗ ಮಾಂಸ ಚರ್ಮ ಹರಿದು ಬೇಪಟ್ಟಿದ್ದು, ಕುತ್ತಿಗೆಯ ಬಲ ಬದಿ ಒಂದು ಇಂಚು ಉದ್ದದ ಗೀರಿದ ಗಾಯ, ಕುತ್ತಿಗೆಯ ಎಡಬದಿಯಲ್ಲಿ ಸುಮಾರು ಅರ್ಧ ಇಂಚು ಉದ್ದದ ಗೀರಿದ ರಕ್ತ ಗಾಯ ಹಾಗೂ ಸಣ್ಣ ಗಾಯ, ಮೂಗು ಚಪ್ಪಟೆಯಾಗಿದ್ದು ಬಲ ಕೈ, ಬೆನ್ನಿನಲ್ಲಿ, ಕೋಲುಕೈಯಲ್ಲಿ ತರಚಿದ ಗಾಯ

ಕಂಡುಬಂದಿರುತ್ತದೆ. ಮೃತಳು ಧರಿಸಿದ ಬಟ್ಟೆಗಳು ಇದ್ದವು. ಕೈಗಳಲ್ಲಿ ಬಂಗಾರದಂತೆ ಕಾಣುವ ಬಳೆಗಳು, ಮೂಗಿನಲ್ಲಿ ಮುಗುತ್ತಿ, ಮುಖದ ಮೇಲೆ ಒಂದು ತಲೆದಿಂಬು ಕಂಡುಬಂದಿರುತ್ತದೆ. ಪಂಚರ ಸಮಕ್ಷಮ ಶವ ಪಂಚನಾಮೆ ಬರೆದು ಸಹಿ ಪಡೆದಿರುತ್ತೇನೆ. ಸೊತ್ತುಗಳ ಪೈಕಿ ತಲೆ ದಿಂಬು, ಕಾಟನ್ ಸೀರೆ, ಲಂಗ, ರವಕೆ ಇವುಗಳನ್ನು ಎಂಓ-1 ರಿಂದ 4 ಎಂದು ಈಗಾಗಲೇ ಗುರುತಿಸಲಾಗಿದೆ. ಶವ ಪಂಚನಾಮೆಯನ್ನು ಈಗಾಗಲೇ ನಿಪಿ.15 ಎಂದು, ಸಾಕ್ಷಿಯ ಸಹಿಯನ್ನು ನಿಪಿ.15(ಎ) ಎಂದು ಗುರುತಿಸಲಾಗಿದೆ. ನಂತರ ಮೃತ ದೇಹವನ್ನು ಕೆಎಂಸಿ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಿಕೊಡಲಾಗಿರುತ್ತದೆ. ಬಳೆ ಮತ್ತು ಮೂಗುತ್ತಿಯನ್ನು ದೂರುದಾರರಿಗೆ ಹಸ್ತಾಂತರಿಸಲಾಗಿರುತ್ತದೆ. ಶವ ಪಂಚನಾಮೆ ಕಾಲದಲ್ಲಿ ಹಾಜರಿದ್ದ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಛಾಯಾ ಚಿತ್ರಗಳನ್ನು ಸಹ ತೆಗೆದಿರುತ್ತೇನೆ. ಕಚ್ಚಾ ನಕಾಶೆ ನಿಪಿ.13 ರಂತೆ ತಯಾರಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ.13(ಸಿ) ಎಂದು ಗುರುತಿಸಲಾಯಿತು.

2. ಅದೇ ದಿನ ಮಧ್ಯಾಹ್ನ 2-15 ರಿಂದ 3-00 ಗಂಟೆಯವರೆಗೆ ಪಂಚರ ಸಮಕ್ಷಮ ಸ್ಥಳ ಮಹಜರು ಜರುಗಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ.5(ಸಿ) ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆಯ ಸಮಯದಲ್ಲಿ ದೂರುದಾರರು ಕೃತ್ಯ ಸ್ಥಳದಲ್ಲಿದ್ದ ಕಪಾಟಿನ ಒಳಗೆ ಇದ್ದ ರೂ.1,50,000/- ನಗದು, ಬಂಗಾರದ ಚಂದ್ರ ಸರ, ಒಂದು ಕಡ್ಡಿ ಸರ, ಎರಡು ಬಳೆಗಳನ್ನು ತೋರಿಸಿದ್ದು ಅವುಗಳನ್ನು ಪರಿಶೀಲಿಸಿ ಮೃತನಿಗೆ ಸೇರಿದ ಸೊತ್ತುಗಳು ಎಂದು ತನಿಖೆಯಲ್ಲಿ ತಿಳಿದು ಬಂದ ಕಾರಣ ಅವುಗಳನ್ನು ದೂರುದಾರರಿಗೆ ಹಿಂತಿರುಗಿಸಲಾಯಿತು. ಅದೇ ಸಮಯದಲ್ಲಿ ನಿಪಿ.6 ರಿಂದ 8 ರಂತೆ ಛಾಯಾ ಚಿತ್ರ ತೆಗೆದಿರುತ್ತೇನೆ. ಸ್ಥಳ ತನಿಖೆ ಕಾಲದಲ್ಲಿ ಇನ್ನೊಂದು ಕಪಾಟಿನ ಬಾಗಿಲು ತೆರೆದಿರುವುದು ಕಂಡುಬಂದಿದ್ದು ಒಳಗಡೆ ಇದ್ದ ಬಂಗಾರದ ಒಡವೆಗಳು ಹಾಗೂ ನಗದನ್ನು ದೋಚಿಕೊಂಡು ಹೋಗಿರುವುದಾಗಿ ಪಿರ್ಯಾದುದಾರರು ತಿಳಿಸಿರುತ್ತಾರೆ. ದೋಚಿಕೊಂಡು ಹೋಗಿರುವ ವಸ್ತುಗಳ ವಿವರವನ್ನು ನಿಪಿ.12 ಎಂದು ದೂರುದಾರರು ಲಿಖಿತವಾಗಿ ನೀಡಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ12(ಬಿ) ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ದೂರುದಾರರ ಮರು ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ಚಾಸಾ5 ರಿಂದ 7 ರವರ ಹೇಳಿಕೆಯನ್ನು ದಾಖಲೆ ಮಾಡಿಕೊಂಡಿರುತ್ತೇನೆ. ಸಂಶಯುತ ಮೊಬೈಲ್ ಸಂಖ್ಯೆಗಳ ಬಗ್ಗೆ ಮಾಹಿತಿ ಒದಗಿಸುವಂತೆ ಪೋಲಿಸ್ ಅಧೀಕ್ಷಕರಿಗೆ ವರದಿ ಮಾಡಿಕೊಂಡಿರುತ್ತೇನೆ. ಛಾಯಾ ಚಿತ್ರ ತೆಗೆದ ಸಿಬ್ಬಂದಿಯ ದೃಢೀಕರಣ ಪತ್ರವನ್ನು ನಿಪಿ36 ರಂತೆ ಪಡೆದುಕೊಂಡಿರುತ್ತೇನೆ.

3. ಅದೇ ದಿನ ಆರೋಪಿತರ ಪತ್ತೆಗಾಗಿ ಸಿಬ್ಬಂದಿಗಳನ್ನು ನೇಮಿಸಿರುತ್ತೇನೆ. ಮರುದಿನ ಚಾಸಾ.3 ಇವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ಆರೋಪಿತರನ್ನು ಹುಬ್ಬಳ್ಳಿಯ ಬಸ್ಸು ನಿಲ್ದಾಣದಲ್ಲಿ ವಶಕ್ಕೆ ಪಡೆದ ಸಿಬ್ಬಂದಿಗಳು ದಿನಾಂಕ 18-02-2020 ರಂದು ಸಂಜೆ 7-00 ಗಂಟೆಗೆ ನನ್ನ ಮುಂದೆ ಹಾಜರುಪಡಿಸಿ ನಿಪಿ.33 ರಂತೆ ವರದಿ ನೀಡಿರುತ್ತಾರೆ. ರಾತ್ರಿ 7-45 ರ ಹೊತ್ತಿಗೆ ಪಂಚರನ್ನು ಬರಮಾಡಿಕೊಂಡು ಪಂಚರ ಸಮಕ್ಷಮ ಆರೋಪಿತರನ್ನು ದಸ್ತಗಿರಿ ಮಾಡಿ ಅವರ ವಶದಲ್ಲಿದ್ದ ಎರಡು ಮೊಬೈಲ್ ಫೋನ್ ಗಳನ್ನು ಮುದ್ದೆಮಾಲು-5 ಮತ್ತು 6 ರಂತೆ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಮಹಜರನ್ನು ನಿಪಿ-16 ಎಂದು ಗುರುತಿಸಲಾಯಿತು, ಸಾಕ್ಷಿಯ ಸಹಿಯನ್ನು ನಿಪಿ.16(ಸಿ) ಎಂದು ಗುರುತಿಸಲಾಯಿತು. ಆರೋಪಿತರು ಸ್ವಇಚ್ಛಾ ಹೇಳಿಕೆಯನ್ನು ನೀಡಿರುತ್ತಾರೆ. ರಾತ್ರಿಯಾದ ಕಾರಣ ಠಾಣಾ ಭದ್ರಿಕೆಯಲ್ಲಿ ಇರಿಸಿರುತ್ತೇನೆ. ಸ್ವ ಇಚ್ಛಾ ಹೇಳಿಕೆಯಲ್ಲಿ ಆರೋಪಿತರು ತಮ್ಮ ಜೊತೆ ಬಂದರೆ ಕೃತ್ಯ ನಡೆಸಿದ ಸ್ಥಳ ಮತ್ತು ದೋಚಿದ ಹಣ ಮತ್ತು ಚಿನ್ನವನ್ನು ಇಟ್ಟಿರುವ ಸ್ಥಳವನ್ನು ತೋರಿಸಿ ಕೊಡುವುದಾಗಿ ತಿಳಿಸಿರುತ್ತಾರೆ. ಸದ್ರಿ ಹೇಳಿಕೆಯ ಭಾಗವನ್ನು ನಿಪಿ.40 ಮತ್ತು 41 ಎಂದು ಗುರುತಿಸಲಾಯಿತು. ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಹೆಚ್ಚಿನ ತನಿಖೆಗಾಗಿ 7 ದಿನಗಳ ಕಾಲ ಪೋಲಿಸ್ ಅಭಿರಕ್ಷೆಗೆ ಪಡೆದುಕೊಂಡಿರುತ್ತೇನೆ. ದಿನಾಂಕ 19-02-2020 ರಂದು ಪಂಚರನ್ನು ಬರಮಾಡಿಕೊಂಡು ನಾವು ಆರೋಪಿಗಳು ಹಾಗೂ ಪಂಚರೊಂದಿಗೆ ಕೃತ್ಯ ನಡೆದ ಸ್ಥಳಕ್ಕೆ ಹೋಗಿರುತ್ತೇವೆ. ಆಗ ಘಟನಾ ಸ್ಥಳದಲ್ಲಿ ಇನ್ನೊಂದು ಮಹಜರನ್ನು ತಯಾರಿಸಿರುತ್ತೇನೆ. ಅದನ್ನು ಈಗಾಗಲೇ ನಿಪಿ.18 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.18(ಬಿ) ಎಂದು ಗುರುತಿಸಲಾಯಿತು. ಛಾಯಾ ಚಿತ್ರವನ್ನು ಈಗಾಗಲೇ ನಿಪಿ.19 ಮತ್ತು 20 ಎಂದು ಗುರುತಿಸಲಾಗಿದೆ. ನಂತರ ಆರೋಪಿತರ ಸಮೇತ ಠಾಣೆಗೆ ವಾಪಾಸು ಬಂದಿದ್ದು ದೂರುದಾರರು, ಚಾಸಾ2, 3, 5, 7, 8 ಇವರುಗಳ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

4. ದಿನಾಂಕ 20-02-2020 ರಂದು ಪಂಚರು, ಅಕ್ಕಸಾಲಿಗ, ನಾಗರಾಜ ಪ್ರಭು ಇವರನ್ನು ಬೆಳಿಗ್ಗೆ 4-00 ಗಂಟೆ ಹೊತ್ತಿಗೆ ಠಾಣೆಗೆ ಕರೆಸಿರುತ್ತೇನೆ. ಆರೋಪಿತರ ಸ್ವಇಚ್ಛಾ ಹೇಳಿಕೆಯ ಆಧಾರದಂತೆ ಎರಡು ವಾಹನಗಳಲ್ಲಿ ಭಟ್ಕಳ ಮಾರ್ಗವಾಗಿ ಬೆಳಗಾವಿಯ ಕುರ್ಲಾಪುರದ ಬಳಿ ದೇವಸ್ಥಾನದ ಹತ್ತಿರ ವಾಹನವನ್ನು ನಿಲ್ಲಿಸುವಂತೆ ಆರೋಪಿತರು ತಿಳಿಸಿದ್ದು 100 ಮೀ.ದೂರ

ಮುಂದೆ ಕ್ರಮಿಸಿದಾಗ ಒಂದು ಮನೆಯ ಹಿಂಭಾಗದಲ್ಲಿರುವ ಜೋಳ ಬೆಳೆದಿರುವ ಗದ್ದೆಗೆ ಕರೆದುಕೊಂಡು ಹೋಗಿ ಒಣ ಗಿಡಗಳನ್ನು ಹಾಗೂ ಕಲ್ಲನ್ನು ಸರಿಸಿ ಮೆದುವಾದ ಮಣ್ಣಿನ ಅಡಿಯಲ್ಲಿ ಹೂತಿಟ್ಟಿದ್ದ ಚೀಲವನ್ನು ತೆರೆದು ತೋರಿಸಿದ್ದು ಅದರ ಒಳಗಡೆ ಎರಡು ಪ್ರತ್ಯೇಕ ಕವರುಗಳು ಇದ್ದು ಅವುಗಳನ್ನು ಬಿಚ್ಚಿ ನೋಡಲಾಗಿ, ಒಂದು ಕವರ್ ನಲ್ಲಿ ವಿವಿದ ನಮೂನೆಯ 9 ಆಭರಣಗಳು ಇದ್ದು ರೂ.8000/- ನಗದು ಹಣ ಇತ್ತು. ಆಭರಣಗಳನ್ನು ನಮ್ಮೊಂದಿಗೆ ಇದ್ದ ಅಕ್ಕಸಾಲಿಗ ಪರಿಶೀಲಿಸಿ ಅವುಗಳು ಬಂಗಾರದ ಆಭರಣಗಳು ಎಂದು ದೃಢಪಡಿಸಿರುತ್ತಾರೆ. ಕೃತ್ಯದ ನಂತರ ಹಂಚಿಕೊಂಡಿದ್ದ ಚಿನ್ನಾಭರಣಗಳಲ್ಲಿ ತನಗೆ ಬಂದ ಸೊತ್ತುಗಳು ಎಂದು ಒಂದನೇ ಆರೋಪಿ ತಿಳಿಸಿರುತ್ತಾನೆ. ಸೊತ್ತುಗಳಿಗೆ ಕ್ರಮ ಸಂಖ್ಯೆ ನೀಡಿ ಅಮಾನತ್ತುಪಡಿಸಿ ಸೀಲು ಮಾಡಲಾಯಿತು.

5. ಇನ್ನೊಂದು ಪ್ಯಾಕೇಟನ್ನು ತೆರೆದು ನೋಡಲಾಗಿ ಅದರೊಳಗೆ ಆರು ಆಭರಣಗಳು ಇದ್ದವು. ಐದು ಆಭರಣಗಳು ಚಿನ್ನದ್ದು ಹಾಗೂ ಒಂದು ಆಭರಣ ಬೆಳ್ಳಿಯದ್ದು ಎಂದು ನಮ್ಮೊಂದಿಗೆ ಇದ್ದ ಅಕ್ಕಸಾಲಿಗ ಪರಿಶೀಲಿಸಿ ಅವುಗಳ ಬಗ್ಗೆ ದೃಢಪಡಿಸಿರುತ್ತಾರೆ. ಕೃತ್ಯದ ನಂತರ ಹಂಚಿಕೊಂಡಿದ್ದ ಚಿನ್ನಾಭರಣಗಳಲ್ಲಿ ತನಗೆ ಬಂದ ಸೊತ್ತುಗಳು ಎಂದು ಎರಡನೇ ಆರೋಪಿ ತಿಳಿಸಿರುತ್ತಾನೆ. ಸೊತ್ತುಗಳಿಗೆ ಕ್ರಮ ಸಂಖ್ಯೆ ನೀಡಿ ಅಮಾನತ್ತುಪಡಿಸಿ ಸೀಲು ಮಾಡಲಾಯಿತು. ಅದೇ ಸ್ಥಳದಲ್ಲಿ ನಿಪಿ.14 ರಂತೆ ಮಹಜರು ಜರುಗಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ.14(ಡಿ) ಎಂದು ಗುರುತಿಸಲಾಯಿತು. ಆಗ ವಶಪಡಿಸಿಕೊಂಡ ಸೊತ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳ ಛಾಯಾ ಚಿತ್ರಗಳನ್ನು ನೋಡುತ್ತಿದ್ದು ನಿಪಿ.10 ಎಂದು ಗುರುತಿಸಲಾಗಿದೆ. ಅದೇ ಸ್ಥಳದಲ್ಲಿ ಛಾಯಾ ಚಿತ್ರ ತೆಗೆದಿದ್ದು ನಿಪಿ.22 ರಿಂದ 27 ಎಂದು ಗುರುತಿಸಲಾಗಿದೆ. ಎರಡು ಪ್ಲಾಸ್ಟಿಕ್ ತೊಟ್ಟೆ ಮತ್ತು ಹಳದಿ ಬಣ್ಣದ ಬಟ್ಟೆ ಚೀಲವನ್ನು ಒಟ್ಟಾಗಿ ಈಗಾಗಲೇ ಮುದ್ದೆಮಾಲು-7 ಎಂದು ಗುರುತಿಸಲಾಗಿದೆ.

6. ವಸ್ತುಗಳನ್ನು ಅಮಾನತ್ತುಪಡಿಸಿಕೊಂಡ ನಂತರ ಆರೋಪಿತರು ಮತ್ತು ಸೊತ್ತುಗಳೊಂದಿಗೆ ಠಾಣೆಗೆ ವಾಪಾಸು ಬಂದು ನಂತರ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಎರಡನೇ ಆರೋಪಿ ತಲೆಮರೆಸಿಕೊಂಡಿದ್ದು ಒಂದನೇ ಆರೋಪಿಯನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ನೋಡುತ್ತಿದ್ದು ಆತನೇ ಆರೋಪಿ ಎಂದು ಗುರುತಿಸಿದ್ದೇನೆ.

7. ದಿನಾಂಕ 21-02-2020 ರಂದು ಚಾಸಾ4, 9, 10, 12 ಇವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ಅದೇ ದಿನ ಚಾಸಾ.25 ಇವರ ಕಲಂ 65 ಬಿ ಸಾಕ್ಷ್ಯ ಅಧಿನಿಯಮದಡಿ

ದೃಢೀಕರಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಅದನ್ನು ನಿಪಿ.42 ಎಂದು ಗುರುತಿಸಲಾಯಿತು. ನಂತರ ಕಚ್ಚಾ ಸ್ಥಳದ ಅಧಿಕೃತ ನಕಾಶೆಯನ್ನು ಅಭಿಯಂತರರಿಂದ ನಿಪಿ.29 ರಂತೆ ಪಡೆದು ಕೊಂಡಿರುತ್ತೇನೆ. ಕೃತ್ಯ ಸ್ಥಳದ ದಾಖಲೆಯನ್ನು ಒದಗಿಸುವಂತೆ ತಹಶೀಲ್ದಾರರಿಗೆ ಕೋರಿಕೊಂಡಿದ್ದು ಅವರು ನೀಡಿದ ವಾಸ್ತವ್ಯ ದೃಢೀಕರಣ ಪತ್ರವನ್ನು ಈಗಾಗಲೇ ನಿಪಿ.39 ಎಂದು ಗುರುತಿಸಲಾಗಿದೆ. ಮರಣೋತ್ತರ ಪರೀಕ್ಷೆಯ ಸಮಯದಲ್ಲಿ ವೈದ್ಯರು ಸಂಗ್ರಹಿಸಿದ ಒಟ್ಟು ನಾಲ್ಕು ವಸ್ತುಗಳನ್ನು ಸಿಬ್ಬಂದಿಯ ಮೂಲಕ ಕಳುಹಿಸಿಕೊಟ್ಟಿದ್ದು ಅವುಗಳನ್ನು ವಶಪಡಿಸಿಕೊಂಡು ನಿಪಿ.43 ರಂತೆ ಮಹಜರು ತಯಾರಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ.43(ಎ) ಎಂದು ಗುರುತಿಸಲಾಯಿತು. ನಾಲ್ಕೂ ವಸ್ತುಗಳನ್ನು ವಿಸೇರಾ ಸಮೇತ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಪರೀಕ್ಷೆಗಾಗಿ ಕಳುಹಿಸಿರುತ್ತೇನೆ.

8. ದಿನಾಂಕ 10-04-2020 ರಂದು ಸಾಕ್ಷಿದಾರರಾದ ಚಾಸಾ.13 ಇವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ಈ ಮಧ್ಯೆ ವೈದ್ಯಾಧಿಕಾರಿಗಳಿಂದ ಮರಣೋತ್ತರ ಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ಈಗಾಗಲೇ ನಿಪಿ.31 ಎಂದು ಗುರುತಿಸಲಾಗಿದೆ. ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ, ಮರಣೋತ್ತರ ಪರೀಕ್ಷಾ ಅಂತಿಮ ವರದಿ ಮತ್ತು ತಕ್ಷೀರು ಸ್ಥಳದ ವಾಸ್ತವ್ಯದ ದೃಢೀಕರಣ ಪತ್ರವನ್ನು ಬಾಕಿ ಇಟ್ಟು ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ. ನಂತರ ಬಂದ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ, ಮರಣೋತ್ತರ ಪರೀಕ್ಷಾ ಅಂತಿಮ ವರದಿ ಮತ್ತು ತಕ್ಷೀರು ಸ್ಥಳದ ವಾಸ್ತವ್ಯದ ದೃಢೀಕರಣ ಪತ್ರ ಬಂದ ನಂತರ ವಿಧಿ ವಿಜ್ಞಾನ ಪ್ರಯೋಗಾಲದ ವರದಿ ಹಾಗೂ ಅಮಾನತ್ತುಪಡಿಸಿಕೊಂಡ ತಲೆ ದಿಂಬನ್ನು ವೈದ್ಯರ ಮುಂದೆ ಹಾಜರುಪಡಿಸಿ ಮರಣದ ಅಂತಿಮ ಅಭಿಪ್ರಾಯವನ್ನು ನೀಡುವಂತೆ ಕೋರಿಕೊಂಡಿದ್ದು ಅದರಂತೆ ವೈದ್ಯಾಧಿಕಾರಿ ಅಂತಿಮ ವರದಿ ನೀಡಿದ್ದು ಈ ಎಲ್ಲಾ ದಾಖಲೆಗಳನ್ನು ಸ್ವೀಕರಿಸಿ ಹೆಚ್ಚುವರಿ ಆಪಾದನಾ ಪಟ್ಟಿಯೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆಭರಣಗಳನ್ನು ಅರ್ಜಿದಾರರ ಸುಪರ್ದಿಗೆ ನ್ಯಾಯಾಲಯದ ಆದೇಶದಂತೆ ನೀಡಲಾಗಿರುತ್ತದೆ.

**ಆರೋಪಿತರ ಪರವಾಗಿ ಪಾಟೀ ಸವಾಲುಃ ಶ್ರೀ ಎಸ್.ಪಿ.ಎನ್. ವಕೀಲರಿಂದಃ**

1. ಬೆಳಿಗ್ಗೆ 10-00 ಗಂಟೆಯ ಹೊತ್ತಿಗೆ ಕೃತ್ಯ ನಡೆದ ಸ್ಥಳಕ್ಕೆ ತಲುಪಿರುತ್ತೇನೆ. ನಾನು ಹೋಗುವ ಪೂರ್ವದಲ್ಲಿಯೇ ಸಿಬ್ಬಂದಿಗಳು ಸ್ಥಳ ತಲುಪಿರುತ್ತಾರೆ. ಎಷ್ಟು ಗಂಟೆಗೆ ತಲುಪಿರುತ್ತಾರೆ ಎಂದು ಗೊತ್ತಿಲ್ಲ. ಶವ ಇದ್ದ ಸ್ಥಳದಿಂದ ಬದಲಾಯಿಸಿದ್ದರು ಎಂದರೆ ಸರಿಯಲ್ಲ. ಅಕ್ಕಪಕ್ಕದ

ಮನೆಯವರ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸಿಬ್ಬಂದಿಗಳು ಆರೋಪಿತರನ್ನು ಎಷ್ಟು ಗಂಟೆಗೆ ವಶಕ್ಕೆ ಪಡೆದುಕೊಂಡಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಆರೋಪಿತರನ್ನು ದಸ್ತಗಿರಿ ಮಾಡುವ ಮುಂಚೆ ಹಲವು ಬಾರಿ ಕೃತ್ಯ ಸ್ಥಳಕ್ಕೆ ಹೋಗಿರುತ್ತೇನೆ. ಆರೋಪಿತರ ಮೊಬೈಲ್ ಕರೆಗಳ ಬಗ್ಗೆ  ತನಿಖೆಗೆ ಪ್ರಯತ್ನಿಸಿರುತ್ತೇನೆ. ಅದರ ವಿವರವನ್ನು ಆರೋಪಣಾ ಪಟ್ಟಿಯೊಂದಿಗೆ ಸಲ್ಲಿಸಿರುವುದಿಲ್ಲ. ಮನೆ ರಿಪೇರಿ ಕರಾರು ಪತ್ರವನ್ನು ಪಡೆದುಕೊಂಡಿಲ್ಲ. ಮನೆ ಕೆಲಸ ನಿರ್ವಹಿಸುತ್ತಿದ್ದ ಮೇಸ್ತ್ರಿಗೆ ಲಿಖಿತವಾಗಿ ನೋಟೀಸ್ ನೀಡಿರುವುದಿಲ್ಲ. ಸಾಕ್ಷಿದಾರರು ತಮ್ಮ ಹೇಳಿಕೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಸ್ವಇಚ್ಛಾ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಗುರ್ಲಾಪುರದ ನಿವಾಸಿಗಳನ್ನು ವಿಚಾರಣೆ ಮಾಡಿದ್ದು ಅವರು ಹೇಳಿಕೆ ನೀಡಿರುವುದಿಲ್ಲ. ಛಾಯಾ ಚಿತ್ರದಲ್ಲಿ ಕಾಣುವ ಜೋಳದ ಗಿಡಗಳು ಹಸಿರಾಗಿವೆ ಎಂದರೆ ಒಣಗಿವೆ ಎಂದು ಸಾಕ್ಷಿ ನುಡಿಯುತ್ತಾರೆ.

2. ಆರೋಪಿತರಿಂದ ಸೊತ್ತುಗಳನ್ನು ವಶಪಡಿಸಿಕೊಂಡ ಜಾಗವು ಸಾರ್ವಜನಿಕ ಸ್ಥಳ ಎಂದರೆ ಸರಿಯಲ್ಲ. ಅದು ಎಲ್ಲರ ದೃಷ್ಟಿಗೆ ನಿಲುಕುವ ಸ್ಥಳ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಯಾವುದೇ ಸಿಸಿ ಟಿವಿ ಫೂಟೇಜುಗಳು ಇರುವುದಿಲ್ಲ. ಸೊತ್ತು ಸ್ವಾಧೀನತೆ ಮಾಡುವ ಮುಂಚೆ ನಮ್ಮ ಅಂಗ ಶೋಧನೆ ಮಾಡಿದ ಬಗ್ಗೆ ಮಹಜರು ಮಾಡಿರುವುದಿಲ್ಲ. ಮಹಜರಿಗೆ ಅಕ್ಕಪಕ್ಕದವರ ಸಹಿ ಪಡೆದಿಲ್ಲ ಎಂದರೆ ಯಾರೂ ಮುಂದೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಪೋಟೋಗಳು ಈ ಪ್ರಕರಣಕ್ಕೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಠಾಣೆಗೆ ಬಂದದ್ದೇ ಇಲ್ಲ ಎಂದರೆ ಸರಿಯಲ್ಲ. ಮಹಜರುಗಳನ್ನು ಠಾಣೆಯಲ್ಲೇ ಕುಳಿತು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಸೊತ್ತು ಅಮಾನತ್ತುಪಡಿಸಿದ ಸ್ಥಳದಲ್ಲಿ ನಕಾಶೆ ತಯಾರಿಸಿಲ್ಲ. ಆರೋಪಿತರ ವಶದಿಂದ ಯಾವುದೇ ಸೊತ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಹೋದ ಇಲಾಖಾ ವಾಹನದಲ್ಲಿ ಆರೋಪಿತರು ಮತ್ತು ಸಿಬ್ಬಂದಿಗಳು ಇದ್ದರು. ಇನ್ನೊಂದು ವಾಹನದಲ್ಲಿ ಸಾಕ್ಷಿದಾರರು ಹಾಗೂ ಸಿಬ್ಬಂದಿಗಳು ಸಹಾ ಇದ್ದರು. ಗುರ್ಲಾಪುರಕ್ಕೆ ಹೋದದ್ದೇ ಇಲ್ಲ ಎಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡ ಮುದ್ದೆಮಾಲುಗಳು ಹಾಗೂ ಈ ಪ್ರಕರಣಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕಲಂ 65 ಬಿ ಸಾಕ್ಷ್ಯ ಅಧಿನಿಮಯದಡಿ ನೀಡಿದ ದೃಢೀಕರಣ ಪತ್ರವನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ದೃಢೀಕರಣ ಪತ್ರನೀಡಿದ ಸಿಬ್ಬಂದಿಯ ಮೊಬೈಲ್ ಹಾಗೂ ಕ್ಯಾಮರಾದಲ್ಲಿ ಪೋಟೋ ತೆಗೆದಿರುತ್ತಾರೆ. ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಹಾಗೂ ಈ ಪ್ರಕರಣಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ - </u>** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.